**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ**

**Spl. C(Courrption) 9/2014**

**ಪ್ರಾಸಾ ಃ 1 ಚಾಸಾ ಃ 2**

**ದಿನಾಂಕಃ 13-08-2019**

ಹೆಸರು ಃ- ಮಂಜುನಾಥ ಜಿ
ತಂದೆಯ ಹೆಸರು ಃ- ಗಂಟಲಪ್ಪ
ವಯಸ್ಸು ಃ- 37 ವರ್ಷ
ಉದ್ಯೋಗ ಃ- ಪ್ರಥಮ ದರ್ಜೆ ಸಹಾಯಕರು, ತೋಟಗಾರಿಕೆ ಇಲಾಖೆ, ಮುಳಬಾಗಿಲು.
ವಾಸಸ್ಥಳ ಃ- ಕೋಲಾರ.

**(ಪ್ರಮಾಣವಚನ ಮಾಡಿಸಲಾಗಿದೆ)**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕಃ 23-12-2010 ರಿಂದ 08-09-2017 ರವರೆಗೆ ಪ್ರಥಮ ದರ್ಜೆ ಸಹಾಯಕನೆಂದು ತೋಟಗಾರಿಕೆ ನಿರ್ದೇಶಕರ ಕಛೇರಿ, ಕೋಲಾರದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕಃ 12-11-2012 ರಂದು ಮದ್ಯಾಹ್ನ ಲೋಕಾಯುಕ್ತ ಪೊಲೀಸ್ ಕಛೇರಿ ಕೋಲಾರದಿಂದ ನಮ್ಮ ಹಿರಿಯ ಅಧಿಕಾರಿಗಳಿಗೆ ಪತ್ರ ಬಂತು. ಲೋಕಾಯುಕ್ತ ಪೊಲೀಸರು ಆ ಪತ್ರದಲ್ಲಿ ನಮ್ಮ ಕಛೇರಿಯಿಂದ ಒಬ್ಬ ನೌಕರನನ್ನು ಸಾಕ್ಷಿಯಾಗಿ ನಿಯೋಜಿಸಬೇಕೆಂದು ಕೋರಲಾಗಿತ್ತು. ದಿನಾಂಕಃ 12-11-2012 ರಂದು ನನ್ನ ಹಿರಿಯ ಅಧಿಕಾರಿಗಳು ನನಗೆ ಕೋಲಾರ ಲೋಕಾಯುಕ್ತ ಪೊಲೀಸ್ ಠಾಣೆಗೆ ಹೋಗಿ ವರದಿ ಮಾಡಿಕೊಳ್ಳುವಂತೆ ಹೇಳಿ ಸೂಚಿಸಿದ್ದರಿಂದ ನಾನು ಅದೇ ದಿನ ಸಾಯಂಕಾಲ 05-00 ಘಂಟೆ ವೇಳೆಗೆ ಕೋಲಾರ ಲೋಕಾಯುಕ್ತ ಪೊಲೀಸ್ ಕಛೇರಿಗೆ ಹೋಗಿ ವರದಿ ಮಾಡಿಕೊಂಡೆನು. ನನ್ನಂತೆ ಚಾಸಾ-3 ಕುಬೇರಯ್ಯ ಸಹ ಇನ್ನೊಬ್ಬ ಸಾಕ್ಷಿದಾರನೆಂದು ವರದಿ ಮಾಡಿಕೊಂಡಿದ್ದರು. ಕೋಲಾರ ಲೋಕಾಯುಕ್ತ ಪೊಲೀಸ್ ಕಛೇರಿಯಲ್ಲಿ ನನಗೆ ಮತ್ತು ಚಾಸಾ-3 ನೇದವರಿಗೆ ಈ ಪ್ರಕರಣದ ವಿಷಯ ತಿಳಿಸಿ ಹೇಳಿ ಮರುದಿನ ಬೆಳಗ್ಗೆ 04-00 ಘಂಟೆಗೆ ಅವರ ಕಛೇರಿಗೆ ಬರುವಂತೆ ಹೇಳಿ ಕಳುಹಿಸಿದರು. ನಾನು ಮತ್ತು ಚಾಸಾ-3 ಮರು ದಿನ ಬೆಳಗ್ಗೆ 04-00 ಘಂಟೆ ವೇಳೆಗೆ ಕೋಲಾರ ಲೋಕಾಯುಕ್ತ ಪೊಲೀಸ್ ಠಾಣೆಗೆ ಹೋಗಿ ವರದಿ ಮಾಡಿಕೊಂಡೆವು. ಕೋಲಾರ ಲೋಕಾಯುಕ್ತ ಪೊಲೀಸ್‌ರು ದಿನಾಂಕಃ 23-11-2012 ರ ಬೆಳಗ್ಗೆ 04-00 ಘಂಟೆಗೆ ನಾನು ಮತ್ತು ಚಾಸಾ-3 ಹೋಗಿ ವರದಿ ಮಾಡಿಕೊಂಡ

ನಂತರ ಒಂದು ವಾಹನದಲ್ಲಿ ಬೆಂಗಳೂರು ಕಡೆಗೆ ಕರೆದುಕೊಂಡು ಹೋದರು. ಕೋಲಾರ ಲೋಕಾಯುಕ್ತ ಪೊಲೀಸ್‌ರು ನನಗೆ ಮತ್ತು ಚಾಸಾ-3 ನೇದವರಿಗೆ ಬೆಂಗಳೂರಿನ ಆರ್.ಟಿ ನಗರದಲ್ಲಿರುವ 1 ನೇ ಆರೋಪಿ ಫಾರೂಕ್ ಸುಲ್ತಾನ ಅವರ ಮನೆಗೆ ಕರೆದುಕೊಂಡು ಹೋದರು. 1 ನೇ ಆರೋಪಿ ಮನೆಯ ಬಾಗಿಲು ತೆಗೆದರು. ಕೋಲಾರ ಲೋಕಾಯುಕ್ತ ಪೊಲೀಸ್‌ರು ಫಾರುಕ್ ಸುಲ್ತಾನ ಯಾರೆಂದು ವಿಚಾರಿಸಿದಾಗ ತಾನೇ ಫಾರೂಕ್ ಸುಲ್ತಾನ ಎಂದು 1 ನೇ ಆರೋಪಿ ಹೇಳಿದರು. ಕೋಲಾರ ಲೋಕಾಯುಕ್ತ ಪೊಲೀಸ್‌ರು 1 ನೇ ಆರೋಪಿಗೆ ಸರ್ಚ್ ವಾರೆಂಟ್ ತೋರಿಸಿ 1 ನೇ ಆರೋಪಿಯ ಸಹಿ ಪಡೆದುಕೊಂಡರು ಹಾಗೂ ನನ್ನ ಸಹಿಯನ್ನು ಸಹ ಪಡೆದುಕೊಂಡರು. ಈಗ ತೋರಿಸಿದ ಸರ್ಚ್ ವಾರೆಂಟ್ ಮೇಲೆ ನಾನು ಸಹಿ ಮಾಡಿದ್ದೇನೆ. ಸರ್ಚ್ ವಾರೆಂಟ್‌ನ್ನು ನಿಪಿ-1 ಎಂದು ಹಾಗೂ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ 1 ನೇ ಆರೋಪಿ ಫಾರೂಕ್ ಸುಲ್ತಾನ ಅವರದ್ದು ಇದೆ, ಈ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಕೋಲಾರ ಲೋಕಾಯುಕ್ತ ಪೊಲೀಸ್‌ರು 1 ನೇ ಆರೋಪಿಯ ಮನೆಯಲ್ಲಿ ಶೋಧನಾ ಕಾರ್ಯ ಪ್ರಾರಂಭಿಸಿದರು. ಮನೆಯ ಬೆಡ್ ರೂಮ್‌ನಲ್ಲಿ ಕ್ರಮ ಸಂಖ್ಯೆ 1 ರಿಂದ 12 ರಲ್ಲಿ ಗುರುತಿಸಿದ ದಾಖಲಾತಿಗಳು ಸೂಟ್-ಕೇಸಿನಲ್ಲಿ ದೊರೆತವು. ಮಹಜರ್ ಅಡಿಯಲ್ಲಿ ಕೋಲಾರ ಲೋಕಾಯುಕ್ತ ಪೊಲೀಸ್‌ರು ಆ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡರು. ಮಹಜರ್-ಗೆ ನಾನು ಸಹಿ ಮಾಡಿದ್ದೇನೆ. ಆ ದಾಖಲೆಗಳಿಗೆ ನಾನು ಸಹಿ ಮಾಡಿದ್ದೇನೆ. ಈಗ ತೋರಿಸಿದ ಕ್ರಮ ಸಂಖ್ಯೆ 1 ರಿಂದ 12 ರಲ್ಲಿಯ ದಾಖಲೆಗಳನ್ನು ನಿಪಿ-2 ರಿಂದ ನಿಪಿ-13 ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿಗಳು ನನ್ನವು, ನನ್ನ ಸಹಿಗಳನ್ನು ನಿಪಿ-2(ಎ), ನಿಪಿ-3(ಎ), ನಿಪಿ-4(ಎ), ನಿಪಿ-5(ಎ), ನಿಪಿ-6(ಎ), ನಿಪಿ-7(ಎ), ನಿಪಿ-8(ಎ), ನಿಪಿ-9(ಎ), ನಿಪಿ-10(ಎ), ನಿಪಿ-11(ಎ), ನಿಪಿ-12(ಎ) ಮತ್ತು ನಿಪಿ-13(ಎ) ಎಂದು ಗುರುತಿಸಲಾಯಿತು. ಕೋಲಾರ ಲೋಕಾಯುಕ್ತ ಪೊಲೀಸ್‌ರು ನಿಪಿ-2 ರಿಂದ ನಿಪಿ-13 ರಲ್ಲಿಯ ದಾಖಲೆಗಳನ್ನು ಜೆರಾಕ್ಸ್ ಮಾಡಿಸಿ ಜೆರಾಕ್ಸ್ ಪ್ರತಿಗಳನ್ನು 1 ನೇ ಆರೋಪಿಗೆ ಕೊಟ್ಟರು. ಒಂದು ದೊಡ್ಡ ಎನ್‌ವೆಲಪ್‌ನಲ್ಲಿ ನಿಪಿ-2 ರಿಂದ ನಿಪಿ-13 ರಲ್ಲಿಯ ದಾಖಲೆಗಳನ್ನು ಹಾಕಿ ಸೀಲ್ ಮಾಡಿ

ಅಮಾನತ್ತು ಪಡಿಸಿಕೊಂಡರು. ನಂತರ ಮತ್ತೊಂದು ಬೆಡ್ ರೂಮ್‌ನಲ್ಲಿ ಹೋಗಿ ಶೋಧನೆ ಮಾಡಿದಾಗ 17 ಬೆಳ್ಳಿ ಬಂಗಾರದ ಒಡವೆಗಳು ದೊರೆತವು. ರೂ.20,000/- ನಗದು ಹಣ ಇತ್ತು. ಒಂದು ಬಾಂಡ್ ಮೇಲೆ 1 ನೇ ಆರೋಪಿಯ ಸಹಿ ತೆಗೆದುಕೊಂಡು 1 ರಿಂದ 17 ನೇ ಬೆಳ್ಳಿ ಬಂಗಾರದ ಆಭರಣಗಳನ್ನು 1 ನೇ ಆರೋಪಿಗೆ ವಾಪಸ್ಸು ಕೊಟ್ಟರು. ರೂ.20,000/- ನಗದು ಹಣವನ್ನು ಒಂದು ಕವರ್-ನಲ್ಲಿ ಹಾಕಿ ಸೀಲ್ ಮಾಡಿ ಅಮಾನತ್ತು ಪಡಿಸಿಕೊಂಡರು. ಮಹಜರ್-ಗೆ 1 ನೇ ಆರೋಪಿತಳ ಸಹಿ ತೆಗೆದುಕೊಂಡರು. ಈಗ ತೋರಿಸಿದ ಜಪ್ತು ಪಂಚನಾಮೆ ಜಾಗದಲ್ಲಿ ತಯಾರು ಮಾಡಿದ್ದು ಇದೆ, ಇದನ್ನು ನಿಪಿ-14 ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ ನನ್ನದು, ನನ್ನ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಕೋಲಾರ ಲೋಕಾಯುಕ್ತ ಪೊಲೀಸ್‌ರು ನಮಗೆ ಮತ್ತು 1 ನೇ ಆರೋಪಿಯ ಸಮೇತ ಬೆಳಗಿನ ಸುಮಾರು 05-30 ಘಂಟೆ ವೇಳೆಗೆ ಕೋಲಾರ ಲೋಕಾಯುಕ್ತ ಪೊಲೀಸ್ ಕಛೇರಿಗೆ ಕರೆದುಕೊಂಡು ಬಂದರು. ಕೋಲಾರ ಲೋಕಾಯುಕ್ತ ಪೊಲೀಸ್ ಕಛೇರಿಯಲ್ಲಿ ಲೋಕೇಶ್ ಇನ್ಸ್-ಪೆಕ್ಟರ್ ರವರು 1 ನೇ ಆರೋಪಿಯ ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಬರವಣಿಗೆ ಮಾಡಿಸಿಕೊಂಡು ಆ ಬಗ್ಗೆ ಪಂಚನಾಮೆ ಮಾಡಿಕೊಂಡರು. ನಾನು ಆ ಪಂಚನಾಮೆಗೆ ಸಹಿ ಮಾಡಿದ್ದೇನೆ. ಈಗ ತೋರಿಸಿದ ಪಂಚನಾಮೆ ನನ್ನ ಸಮ್ಮುಖದಲ್ಲಿ ಆಗಿದೆ, ಈ ಪಂಚನಾಮೆಯನ್ನು ನಿಪಿ-15 ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ ನನ್ನದು, ನನ್ನ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ನಿಪಿ-15 ರ ವೇಳೆಗೆ ಚಾಸಾ-3 ಮತ್ತು 1 ನೇ ಆರೋಪಿ ಇದ್ದರು. ಈಗ ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಈ ಪಂಚನಾಮೆ ವೇಳೆಗೆ ಇದ್ದರು. ಈಗ ತೋರಿಸಿದ ಇನ್‌ಡಿಮ್‌ನಿಟಿ ಬಾಂಡ್-ಗೆ ನಾನು ಸಹಿ ಮಾಡಿದ್ದೇನೆ. ಈ ಇನ್‌ಡಿಮ್‌ನಿಟಿ ಬಾಂಡ್ ನಿಪಿ-16 ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ ನನ್ನದು, ನನ್ನ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ 1 ನೇ ಆರೋಪಿಯದು ಇದೆ, ಈ ಸಹಿಯನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 1 ನೇ ಆರೋಪಿತರ ಪರ ಶ್ರೀ ಜಿಎಸ್ ವಕೀಲರು ಶ್ರೀ ಎಂ.ಹೆಚ್., ವಕೀಲರ ಪರವಾಗಿ ಹಾಜರಿದ್ದು, ಅವರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

ಪಾಟೀ ಸವಾಲು ಆರೋಪಿ 2, 3 ಮತ್ತು 5 ರಿಂದ 7 ನೇದವರ ಪರಃ ಸದರಿ ಆರೋಪಿತರ ಪರ ವಕೀಲರು ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ
ಸಹಿ/-

(ಐ.ಎಫ್.ಬಿದರಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಕೋಲಾರ.**